# ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಆ್ಯಂಡ್ ಕೆಮಿಕಲ್ಸ್ ಲಿಮಿಟೆಡ್, ಸಿದ್ದಾಪೂರ

(CIN : U85110KA1995PLC017861)

**ನೋಂದಾಯಿತ ಮತ್ತು ಕಾರ್ಖಾನೆಯ ಕಛೇರಿ: ಸಾ॥ ಸಿದ್ದಾಪೂರ – 587 301, ತಾ: ಜಮಖಂಡಿ, ಜಿ: ಬಾಗಲಕೋಟೆ**

**ಫೋನ್ ನಂ.(08353) 238004/238200, ವೆಬ್‌ಸೈಟ್: www.prabhusugars.com, ಇ–ಮೇಲ್: prabhusugar.cs@gmail.com**

## ಪ್ರಕಟಣೆ

**ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಆ್ಯಂಡ್ ಕೆಮಿಕಲ್ಸ್ ಲಿಮಿಟೆಡ್ (ಕಂಪನಿ) ಯ 28ನೇ ವಾರ್ಷಿಕ ಸಾಮಾನ್ಯ ಸಭೆಯನ್ನು (ಎಜಿಎಂ) ಶನಿವಾರ ದಿನಾಂಕ: 30ನೇ ಸಪ್ಟೆಂಬರ್ 2023 ರಂದು ಬೆಳಿಗ್ಗೆ 11:00 ಗಂಟೆಗೆ ವೀಡಿಯೋ ಕಾನ್ಫರೆನ್ಸಿಂಗ್ (ವಿಸಿ)/ ಇತರೆ ಆಡಿಯೋ ವಿಷುವಲ್ ಮೀನ್ಸ್ (ಓಎವಿಎಂ)** ಮೂಲಕ ನಡೆಯಲು ಸೂಚನೆ ನೀಡಲಾಗಿದ್ದು, ಕಾರ್ಯಸೂಚಿಯನ್ನು ನೋಟೀಸಿನಲ್ಲಿ ಸೂಚಿಸಿರುವಂತೆ ವ್ಯವಹರಿಸಲು ಕೋರಲಾಗಿದೆ.

2022–23ರ ಹಣಕಾಸು ವರ್ಷದ ವಾರ್ಷಿಕ ವರದಿಯ ಭಾಗವಾಗಿರುವ 22.08.2023ರ ದಿನಾಂಕದ ಎಜಿಎಂ ಪ್ರಕಟಣೆಯನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ ಮತ್ತು ಸದಸ್ಯರ ನೋಂದಾಯಿತ ಇ–ಮೇಲ್ ಮೂಲಕ ರವಾನಿಸಲಾಗಿದೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20ರೊಂದಿಗೆ ಓದಿಕೊಂಡಂತೆ ಕಂಪನಿ ಕಾಯ್ದೆ 2013ರ ಪರಿಚ್ಛೇದ 108ರ ನಿಬಂಧನೆಗಳಿಗೆ ಅನುಗುಣವಾಗಿ ಕಂಪನಿಯು ಇಲೆಕ್ಟ್ರಾನಿಕ್ಸ್ ಮತದಾನದ ಸೌಲಭ್ಯವನ್ನು ಒದಗಿಸಿರುತ್ತದೆ. ಎಜಿಎಂನ ಸೂಚನೆಯಲ್ಲಿ ತಿಳಿಸಲಾದ ವ್ಯವಹಾರವು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ರವರು ಒದಗಿಸುವ ಇಲೆಕ್ಟ್ರಾನಿಕ್ ಮತದಾನ ಸೌಲಭ್ಯದ ಮೂಲಕ ವಹಿವಾಟು ನಡೆಸಲಾಗುವುದು. ಇ–ಮತದಾನದ ಮೇಲ್ವಿಚಾರಣೆಗಾಗಿ ಮತ್ತು ಪರಿಶೀಲನಾಕಾರರಾಗಿ ನಿರ್ದೇಶಕರ ಮಂಡಳಿಯು ಶ್ರೀ.ಗೋಪಾಲಕೃಷ್ಣರಾಜ್ ಎಚ್.ಎಚ್. ಕಂಪನಿ ಸೆಕ್ರೆಟರಿ ಇನ್‌ಪ್ರಾಕ್ಟೀಸ್‌ರವರನ್ನು ನೇಮಕ ಮಾಡಿರುತ್ತಾರೆ. ರಿಮೋಟ್ ಇ–ಮತದಾನದ ಅವಧಿಯು ಬೆಳಿಗ್ಗೆ 9:00 ಗಂಟೆಗೆ ದಿನಾಂಕ 27ನೇ ಸಪ್ಟೆಂಬರ್, ಬುಧವಾರ 2023ರಂದು ಪ್ರಾರಂಭವಾಗಿ ದಿನಾಂಕ: 29ನೇ ಸಪ್ಟೆಂಬರ್, ಶುಕ್ರವಾರ 2023ರಂದು ಸಂಜೆ 5:00 ಗಂಟೆಗೆ ಅಂತ್ಯವಾಗಲಿದೆ.

ಸದಸ್ಯರುಗಳ ರಿಜಿಸ್ಟರ್ ಮತ್ತು ಶೇರು ವರ್ಗಾವಣೆ ಮತ್ತು ಪ್ರಸರ ದಾಖಲಾತಿಗಳು ಸಪ್ಟೆಂಬರ್ 21 ಗುರುವಾರ, 2023 ರಿಂದ ಸಪ್ಟೆಂಬರ್ 22 ಶುಕ್ರವಾರ 2023 ರವರೆಗೆ ಮುಚ್ಚಲ್ಪಡುತ್ತದೆ (ಎರಡೂ ದಿನಗಳು ಸೇರಿವೆ). 2023 ಸಪ್ಟೆಂಬರ್ 23, ಶನಿವಾರದಂದು ಸದಸ್ಯರ ರಿಜಿಸ್ಟರ್ ಹೆಸರು ಕಂಡು ಬರುವ ಸದಸ್ಯರು ಮತದಾನದ ಹಕ್ಕನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.

ವಿಸಿ/ಓಎವಿಎಂ ಸೌಲಭ್ಯದ ಮೂಲಕ ಎಜಿಎಂನಲ್ಲಿ ಭಾಗವಹಿಸುವ ಮತ್ತು ರಿಮೇಟ್ ಇ–ಮತದಾನದ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸುವ ಸದಸ್ಯರು ಮಾತ್ರ ಎಜಿಎಂ ಸಮಯದಲ್ಲಿ ಲಭ್ಯವಿರುವ ಇ–ಮತದಾನ ಸೌಲಭ್ಯದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಎಜಿಎಂ ವಿತರಣೆಯ ಸಮಯದಲ್ಲಿ ಇ–ಮತದಾನದ ಸೌಲಭ್ಯ ಲಭ್ಯವಿರುತ್ತದೆ ಮತ್ತು ಎಜಿಎಂ ಮುಕ್ತಾಯದ 30 ನಿಮಿಷಗಳ ನಂತರ ನಿಷ್ಕ್ರಿಯಗೊಳ್ಳುತ್ತದೆ.

ಸೂಚನೆ ಮತ್ತು ಪೂರ್ಣ ಪ್ರಮಾಣದ ವಾರ್ಷಿಕ ವರದಿಯನ್ನು (ಸಭೆಯ ನೋಟೀಸು, ನಿರ್ದೇಶಕರ ವರದಿ ಮತ್ತು ಅದರ ಲಗತ್ತುಗಳು, ಲೆಕ್ಕಪರಿಶೋಧಕರ ವರದಿ ಮತ್ತು ಲೆಕ್ಕಪರಿಶೋಧನೆಗೆ ಒಳಪಟ್ಟ ಹಣಕಾಸಿನ ತಖ್ತೆಗಳು) ಕಂಪನಿಯ ವೆಬ್‌ಸೈಟ್ www.prabhusugars.com/ಮತ್ತು ಸಿಡಿಎಸ್‌ಎಲ್ ಎಜಿಎಂನ ವೆಬ್‌ಸೈಟ್ www.evotingindia.com ನಲ್ಲಿ ಪ್ರದರ್ಶಿಸಲಾಗುತ್ತದೆ.

ಇಲೆಕ್ಟ್ರಾನಿಕ್ ವಿಧಾನದ ಮತದಾನದ ಸೌಲಭ್ಯದೊಂದಿಗೆ ಸಂಪರ್ಕ ಹೊಂದಿದ ಕುಂದುಕೊರತೆಗಳ ಸಂದರ್ಭದಲ್ಲಿ ಶ್ರೀ ರಾಕೇಶ್ ದಲ್ವಿ, ಹಿರಿಯ ವ್ಯವಸ್ಥಾಪಕರು (ಸಿಡಿಎಸ್‌ಎಲ್) ಸೆಂಟ್ರಲ್ ಡಿಪಾಸಿಟರಿ ಸರ್ವಿಸಿಸ್ (ಇಂಡಿಯಾ) ಲಿಮಿಟೆಡ್, ಎ ವಿಂಗ್, 25ನೇ ಮಹಡಿ, ಮ್ಯಾರಥಾನ್ ಫ್ಯೂಟ್ಯುರೆಕ್ಸ್, ಮಫತ್‌ಲಾಲ್ ಮಿಲ್ ಕಾಂಪೌಂಡ್ಸ್, ಎನ್.ಎಂ ಜೋಶಿ ಮಾರ್ಗ, ಲೊಯರ್ ಪರೆಲ್ (ಪೂರ್ವ) ಮುಂಬೈ–400013 ಇವರಿಗೆ ತಿಳಿಸಬಹುದು ಅಥವಾ helpdesk.evoting@cdslindia.com ಗೆ ಇ–ಮೇಲ್ ಮಾಡಿ ಅಥವಾ 1800225533/022–23058542/43 ಗೆ ಕರೆ ಮಾಡಿ.

"ನಿರ್ದೇಶಕರ ಮಂಡಳಿಯ ಆದೇಶದಂತೆ"

ಸಹಿ/–

**ಜಗದೀಶ ಗುಡಗುಂಟಿ**

**ಚೇರಮನ್ನರು ಹಾಗೂ ವ್ಯವಸ್ಥಾಪಕ ನಿರ್ದೇಶಕರು**

(DIN-00464873)

ಸ್ಥಳ:– ಸಿದ್ದಾಪೂರ

ದಿನಾಂಕ:–22.08.2023